ಕರ್ನಾಟಕ ಸರ್ಕಾರ

# ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,

"ಮಲೆನಾಡ ಸಿರಿ" ಸಾಗರ ರಸ್ತೆ, ಶಿವಮೊಗ್ಗ -577 201.

ದೂರವಾಣಿ ಸಂ:08182 257862 / 257634 ಇಮೇಲ್:madbsecretary@gmail.com

**ಶ್ರೀ ಕೆ.ಎಸ್.ಗುರುಮೂರ್ತಿ, ಮಾನ್ಯ ಅಧ್ಯಕ್ಷರು, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:04.04.2022ರ ಬೆಳಿಗ್ಗೆ 11.00 ಗಂಟೆಗೆ "ಮಲೆನಾಡ ಸಿರಿ" ಸಭಾಂಗಣ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಸಾಗರ ರಸ್ತೆ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿದ್ದ 2022-23ನೇ ಸಾಲಿನ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಥಮ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸಭಾ ನಡವಳಿಗಳು.**

*****

(ಸಭೆಗೆ ಹಾಜರಾದ ಮಾನ್ಯ ಸದಸ್ಯರುಗಳ ಹಾಜರಾತಿ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.)

ಪ್ರಥಮವಾಗಿ ಮಂಡಳಿಯ ಕಾರ್ಯದರ್ಶಿಯವರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ 2022-23ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಭೆಯನ್ನು ಶ್ರೀ ಕೆ.ಎಸ್.ಗುರುಮೂರ್ತಿ, ಮಾನ್ಯ ಅಧ್ಯಕ್ಷರು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದು, ಶ್ರೀಯುತರನ್ನು ಮಾನ್ಯ ಸದಸ್ಯರುಗಳೆಲ್ಲರ ಪರವಾಗಿ ಹಾಗೂ ಮಂಡಳಿಯ ಪರವಾಗಿ ಸ್ವಾಗತಿಸಿದರು. ಸಭೆಗೆ ಹಾಜರಾದ ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ವಿಧಾನಸಭಾ ಸದಸ್ಯರು ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು, ಮಂಡಳಿಯ ಮಾನ್ಯ ನಾಮನಿರ್ದೇಶಿತ ಸದಸ್ಯರುಗಳು, ಜಿಲ್ಲಾಧಿಕಾರಿಗಳು, ಹಾಗೂ ಎಲ್ಲಾ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಸ್ವಾಗತಿಸಿ ವಿಷಯಸೂಚಿಯಂತೆ ಸಭೆಯನ್ನು ನಡೆಸಿಕೊಡಲು ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಮಂಡಳಿಯ ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ ನಾನು ಈ ಸಭೆಯಲ್ಲಿ ಹಾಜರಿರುವಂತಹ ಮಾನ್ಯ ಶಾಸಕರು, ವಿಧಾನಸಭೆ ಮತ್ತು ವಿಧಾನ ಪರಿಷತ್, ಮಾನ್ಯ ನಾಮನಿರ್ದೇಶಿತ ಸದಸ್ಯರುಗಳು, ಜಿಲ್ಲಾಧಿಕಾರಿಗಳು, ಮಂಡಳಿಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು ಹಾಗೂ ಮಾಧ್ಯಮದ ಮಿತ್ರರುಗಳಿಗೆ ಮತ್ತೊಮ್ಮೆ ಸ್ವಾಗತವನ್ನು ಕೋರುತ್ತೇನೆ ಎಂದರು.

ದಿನಾಂಕ : 25.06.2020ರಂದು ಸನ್ಮಾನ್ಯ ಶ್ರೀಯುತ ಬಿ.ಎಸ್.ಯಡಿಯೂರಪ್ಪನವರು ನಿಕಟಪೂರ್ವ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಶ್ರೀಯುತ ಬಸವರಾಜ ಬೊಮ್ಮಾಯಿಯವರು, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರುಗಳ ಆಶಯದಂತೆ 13 ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಸರ್ಕಾರದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಅಧಿಕಾರ ವಹಿಸಿಕೊಂಡ ನಂತರ 2020-21ನೇ ನೇ ಸಾಲಿನಲ್ಲಿ (2012-13ನೇ ಸಾಲಿನಿಂದ 2019-20ನೇ ಸಾಲಿನವರೆಗೆ) ಮುಂದುವರೆದ ಕಾಮಗಾರಿಗಳು ಸೇರಿ ಒಟ್ಟು 1397 ಕಾಮಗಾರಿಗಳನ್ನು ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು, ಪದೇ ಪದೇ ಅನುಷ್ಠಾನಾಧಿಕಾರಿಗಳೊಂದಿಗೆ ಚರ್ಚಿಸಿ 2020-21ನೇ ಸಾಲಿನ ಅಂತ್ಯದ ಒಳಗಾಗಿ ಮಂಡಳಿಯಿಂದ ಕೈಗೆತ್ತಿಕೊಳ್ಳಲಾಗಿರುವ ಎಲ್ಲಾ ಮುಂದುವರೆದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುರಿ ಹೊಂದಲಾಗಿತ್ತು.

K.S.ಗುರುಮೂರ್ತಿ

ಮಾನ್ಯ ನಿಕಟಪೂರ್ವ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮಾರ್ಚ್-2021ರ ಅಂತ್ಯದಲ್ಲಿ ರೂ.10.00 ಕೋಟಿಗಳ ಹೆಚ್ಚುವರಿ ಅನುದಾನ ಪಡೆದು ಮಾರ್ಚ್-2022ರ ಅಂತ್ಯಕ್ಕೆ 236 ಕಾಮಗಾರಿಗಳನ್ನು ಹೊರತುಪಡಿಸಿ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ ಎಂದು ತಿಳಿಸಿದರು. ಸನ್ಮಾನ್ಯ ಸದಸ್ಯರುಗಳು ನೀಡಲಾಗಿರುವ ಕೆಲವು ಕಾಮಗಾರಿಗಳ ಸ್ಥಳದ ಸಮಸ್ಯೆ, ಮಳೆ, ಕೋವಿಡ್-19ರ ಕಾರಣಗಳಿಂದ ಕಾಮಗಾರಿಗಳ ಬದಲಾವಣೆಗಳನ್ನು ನೀಡಿರುವುದರಿಂದ 236 ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಕಾಮಗಾರಿಗಳನ್ನು ಸಹ ಇನ್ನು 2-3 ತಿಂಗಳೊಳಗಾಗಿ ಪೂರ್ಣಗೊಳಿಸಲು ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಮುಂದುವರೆದು 2021-22ನೇ ಸಾಲಿಗೆ ತಮ್ಮೆಲ್ಲರ ಒತ್ತಾಸೆಯಂತೆ ಹಾಗೂ ಮಲೆನಾಡು ಪ್ರದೇಶಗಳ ಹೆಚ್ಚಿನ ಅಭಿವೃದ್ಧಿಗಾಗಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಸಚಿವರು, ಯೋಜನಾ ಮತ್ತು ಕಾರ್ಯಕ್ರಮಗಳ ಸಂಯೋಜನೆ, ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರವನ್ನು ಆಯವ್ಯಯ ಪೂರ್ವದಲ್ಲಿಯೇ ಭೇಟಿ ಮಾಡಿ ಪ್ರತೀ ಸದಸ್ಯರಿಗೆ ರೂ.1.00 ಕೋಟಿಯಂತೆ ಹಾಗೂ ಅಧ್ಯಕ್ಷರ ವಿವೇಚನಾ ನಿಧಿ ಸೇರಿ ಒಟ್ಟು ರೂ.100.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಕೊಡಲು ಕೋರಲಾಗಿರುತ್ತದೆ ಹಾಗೂ ಸನ್ಮಾನ್ಯ ಸದಸ್ಯರುಗಳಾದ ತಾವುಗಳು ಕೂಡ ಈ ಕುರಿತು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಇಲಾಖಾ ಸಚಿವರನ್ನು ಆಯವ್ಯಯದ ಸಭೆಗಳಲ್ಲಿ ಒತ್ತಾಯಿಸುವಂತೆ ಕೋರಲಾಗಿತ್ತು. ಈ ಕುರಿತು ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಚಿವರು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ಕಲ್ಯಾಣ ಇಲಾಖೆ ರವರು ಮತ್ತು ಶ್ರೀ ಲಾಲಾಜಿ ಆರ್.ಮೆಂಡನ್, ಮಾನ್ಯ ಶಾಸಕರು, ಕಾಪು ವಿಧಾನಸಭಾ ಕ್ಷೇತ್ರರವರುಗಳು ಪತ್ರ ಬರೆದು ಮಾನ್ಯ ಮುಖ್ಯಮಂತ್ರಿಗಳನ್ನು ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಒತ್ತಾಯಿಸಿರುತ್ತಾರೆ ಹಾಗೂ ಶ್ರೀ ಹೆಚ್.ಕೆ.ಕುಮಾರಸ್ವಾಮಿ ಮಾನ್ಯ ಶಾಸಕರು, ಸಕಲೇಶಪುರ ವಿಧಾನಸಭಾ ಕ್ಷೇತ್ರರವರು ಆಯವ್ಯಯ ಸಭೆಯಲ್ಲಿ ಈ ಕುರಿತು ಪ್ರಸ್ತಾಪಿಸಿ ಸದಸ್ಯರ ಗಮನ ಸೆಳೆದಿರುತ್ತಾರೆ. ತಮ್ಮೆಲ್ಲರ ಒತ್ತಾಯದಂತೆ ಸರ್ಕಾರವು ಕಳೆದ ಸಾಲಿನ ವಾರ್ಷಿಕ ಆಯವ್ಯಯದ ಶೇ.25ರಷ್ಟು ಹೆಚ್ಚಿಸಿ ಕ್ರಿಯಾಯೋಜನೆ ರೂಪಿಸಲು ಅನುಮತಿ ನೀಡಿದೆ ಎಂದು ತಿಳಿಸಿದರು ಹಾಗೂ ಅಜೆಂಡಾದಂತೆ ಕಾರ್ಯಕಲಾಪ ನಡೆಸಲು ಕಾರ್ಯದರ್ಶಿಯವರಿಗೆ ಸೂಚಿಸಿದರು.

**ಸಭಾ ವಿಷಯ ಸೂಚಿ : 1 :-ದಿನಾಂಕ: 04.04.2022ರಂದು ನಡೆಯುವ ಸಭೆಯ ನೋಟೀಸನ್ನು ಓದಿ ದಾಖಲಿಸುವುದು.**

ಕಾರ್ಯದರ್ಶಿಗಳು ಮಾತನಾಡುತ್ತಾ ಈ ದಿನದ ಸಭೆಯ ನೋಟೀಸನ್ನು ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು ಹಾಗೂ ಸಭಾ ನೋಟೀಸನ್ನು ಓದಿ ದಾಖಲಿಸಲಾಯಿತು.

**ಸಭಾ ವಿಷಯ ಸೂಚಿ: 2:- ದಿನಾಂಕ : 04.09.2021ರಂದು ನಡೆದ ಮಂಡಳಿ ಸಭೆಯ ನಡವಳಿಗಳ ಬಗ್ಗೆ ಅನುಸರಣೆಗಳು.**

ದಿನಾಂಕ : 04.09.2021ರಂದು ನಡೆದ ಸಭೆಯ ತೀರ್ಮಾನದ ಅನುಪಾಲನೆಯನ್ನು ಕಾರ್ಯದರ್ಶಿಗಳು ಮಂಡಿಸಿದರು.

**ವಿಷಯ ಸಂಖ್ಯೆ:2(1) ಕಳೆದ ಸಭೆಯಲ್ಲಿ 2021-22ನೇ ಸಾಲಿಗೆ ತಲಾ ರೂ.1.00 ಕೋಟಿಯಂತೆ ಕ್ರಿಯಾ ಯೋಜನೆಯನ್ನು ರೂಪಿಸಲು ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ವಿಧಾನಸಭೆ/ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಹಾಗೂ ನಾಮನಿರ್ದೇಶಿತ ಸದಸ್ಯರು ಎಲ್ಲರಿಗೂ ಈ ವರ್ಷ ರೂ.1.00 ಕೋಟಿ ಅನುದಾನವನ್ನು ನಿಗದಿ ಮಾಡಲು ಹಾಗೂ ಮಂಡಳಿಯ ಅಧ್ಯಕ್ಷರಿಗೆ ವಿವೇಚನಾ ನಿಧಿಯನ್ನು ನೀಡುವಂತೆ ಸರ್ಕಾರವನ್ನು ಕೋರಲು**

ತೀರ್ಮಾನಿಸಲಾಗಿರುತ್ತದೆ. ಅದರಂತೆ ನಮ್ಮ ಕಛೇರಿಯಿಂದ ದಿನಾಂಕ : 04.10.2021ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೆಂದು ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಹಾಗೂ ಸರ್ಕಾರವು ನಮ್ಮ ಪ್ರಸ್ತಾವನೆಗೆ ದಿನಾಂಕ : 24.11.2021ರ ಪತ್ರ ಸಂಖ್ಯೆ : ಪಿಡಿಎಸ್ 24 / ಪಿಎಂಎಸ್ : 2021ರ ಪತ್ರದಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಶೇ.5% ಅನುದಾನವನ್ನು ಮಂಡಳಿಯ ಅಧ್ಯಕ್ಷರ ವಿವೇಚನೆಗೆ ನಿಗದಿಪಡಿಸಲು ಸೂಚಿಸಲಾಗಿದೆ. ಹಾಗೂ ದಿನಾಂಕ : 19.02.2022ರ ಸರ್ಕಾರದ ಪತ್ರದಲ್ಲಿ 2021-22ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಶೇ.25ರಷ್ಟು ಅನುದಾನವನ್ನು ಹೆಚ್ಚಿಸಿ 2022-23ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ರೂಪಿಸಲು ಸರ್ಕಾರವು ಸೂಚಿಸಿದೆಯೆಂದು ವಿವರಿಸಿದರು. ಈ ಸಂದರ್ಭದಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಮಂಡಳಿಯ ಮಾಜಿ ಅಧ್ಯಕ್ಷರಾದ ಶ್ರೀ ಟಿ.ಡಿ.ರಾಜೇಗೌಡರವರು ಮಾತನಾಡುತ್ತಾ ನಾನು ಅಧ್ಯಕ್ಷನಾಗಿದ್ದಾಗ ರೂ.15.00 ಕೋಟಿ ಸರ್ಕಾರದ ವಿವೇಚನಾ ನಿಧಿಯಡಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿತ್ತು. ನಂತರ ಮಂಡಳಿಯ ಕಛೇರಿ ಕಟ್ಟಡವು ಸುಂದರವಾಗಿ ಇಲ್ಲದೇ ಇರುವುದರಿಂದ ಕಟ್ಟಡ ನಿರ್ವಹಣೆ ಮತ್ತು ಆಧುನೀಕರಣ ಮಾಡುವ ಉದ್ದೇಶವನ್ನು ಹೊಂದಿದ್ದು ರೂ.80.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಈ ಮೀಸಲಿಟ್ಟಿದ್ದ ಅನುದಾನದಲ್ಲಿ ಈಗಿನ ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಅದನ್ನು ಅನುಷ್ಠಾನಗೊಳಿಸಿ ಮಲೆನಾಡು ಪ್ರದೇಶ ಅಭಿವೃದ್ಧಿ ಕಛೇರಿಯ ಆವರಣ, ವಸತಿ ಗೃಹಗಳು, ಉದ್ಯಾನವನ ಆಧುನೀಕರಣಗೊಳಿಸಿರುವುದರಿಂದ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆಂದು ಹೇಳಿದರು. ಮುಂದುವರೆದು ಮಾತನಾಡುತ್ತಾ ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾದಂತೆ ಮಂಡಳಿಯ ಅಧ್ಯಕ್ಷರು ಪ್ರವಾಸ ಮಾಡಿದ ಸಂದರ್ಭದಲ್ಲಿ ಅಭಿವೃದ್ಧಿಗಾಗಿ ಸಾರ್ವಜನಿಕರಿಂದ ಅನುದಾನ ಕೋರುತ್ತಾರೆ. ಹಾಗೆಯೆ ನಾಮ ನಿರ್ದೇಶಿತ ಸದಸ್ಯರುಗಳಿಗೂ ಕೂಡ ಕಾಮಗಾರಿಯನ್ನು ಕೋರುವುದರಿಂದ ಮಾನ್ಯ ಅಧ್ಯಕ್ಷರ ವಿವೇಚನಾ ನಿಧಿಯನ್ನು ಬಲಪಡಿಸಿ ಅವಶ್ಯಕತೆ ಇರುವ ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗಿದೆ. ಈ ಅನುದಾನವನ್ನು ಅಧ್ಯಕ್ಷರ ವಿವೇಚನಾ ನಿಧಿಯನ್ನು ಬಲಪಡಿಸುವ ಬಗ್ಗೆ ಒತ್ತಿ ಹೇಳಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಸಹ ಸಹಮತವನ್ನು ವ್ಯಕ್ತಪಡಿಸಿದರು.

**ವಿಷಯ ಸಂಖ್ಯೆ :2:2:- ಮಲೆನಾಡಿನಲ್ಲಿ ಸರ್ಕಾರದ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು 94ಸಿ ಅಡಿ ಖಾಯಂಗೊಳಿಸಿರುವಂತೆ ಹಾಗೂ ಮಲೆನಾಡಿನಲ್ಲಿ ರೆವಿನ್ಯೂ ಅಂದರೆ ಸೊಪ್ಪಿನ ಬೆಟ್ಟ, ಖುಷ್ಕಿ, ಹುಲ್ಲುಬನಿ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಹ 94ಸಿ ಅಡಿಯಲ್ಲಿ ಖಾಯಂ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಗಿದೆ.**

ಕಾರ್ಯದರ್ಶಿಗಳು ಮಾತನಾಡುತ್ತಾ ಮಲೆನಾಡಿನಲ್ಲಿ ಸರ್ಕಾರದ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು 94ಸಿ ಅಡಿ ಖಾಯಂಗೊಳಿಸಿರುವಂತೆ ಹಾಗೂ ಮಲೆನಾಡಿನಲ್ಲಿ ರೆವಿನ್ಯೂ ಅಂದರೆ ಸೊಪ್ಪಿನಬೆಟ್ಟ, ಖುಷ್ಕಿ, ಹುಲ್ಲುಬನಿ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಹ 94 ಸಿ ಅಡಿಯಲ್ಲಿ ಖಾಯಂ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲುವ

ಸಲುವಾಗಿ ಜಿಲ್ಲಾಧಿಕಾರಿ, ಮಂಗಳೂರು ಜಿಲ್ಲೆ, ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆರವರಿಗೆ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 94ಸಿ ಪ್ರಕಾರ ಮಾಹಿತಿಯನ್ನು ಕೂಡಲೇ ಮಂಡಳಿಗೆ ಸಲ್ಲಿಸುವಂತೆ ಪತ್ರ ಬರೆಯಲಾಗಿದೆ ಎಂದು ಕಾರ್ಯದರ್ಶಿಗಳು ವಿವರಿಸಿದರು. ಇದಕ್ಕೆ ಸಭೆಯು ಸಹಮತಿ ವ್ಯಕ್ತಪಡಿಸಿತು.

## ಸಭಾ ವಿಷಯ ಸೂಚಿ : 3 :- ಸರ್ಕಾರಕ್ಕೆ ಸಲ್ಲಿಸಲಾದ 2022-23ನೇ ಸಾಲಿನ ಆಯವ್ಯಯ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.

ಕಾರ್ಯದರ್ಶಿಗಳು ಮಾತನಾಡುತ್ತಾ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ನಿಯಮಾವಳಿ 1993ರ ನಿಯಮ 6 ಹಾಗೂ 8ರ ಮೇರೆಗೆ 2022-23ನೇ ಸಾಲಿಗಾಗಿ ಮಂಡಳಿಗೆ ರೂ.350.00 ಕೋಟಿ ಅನುದಾನವನ್ನು ಹಂಚಿಕೆ ಮಾಡಲು ಆಯವ್ಯಯ ಪ್ರಸ್ತಾವನೆಯನ್ನು ತಯಾರಿಸಿ ಮಾನ್ಯ ಅಧ್ಯಕ್ಷರ ಅನುಮೋದನೆಯನ್ನು ಪಡೆದು ಈ ಕಛೇರಿ ಪತ್ರ ಸಂಖ್ಯೆ : ಮಪ್ರಅಮಂ:ಕಿ.ನಗದು:ಎ೬:ಆಯವ್ಯಯ:2021-22: 726 ದಿನಾಂಕ : 15.12.2021ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರಕ್ಕೆ ಸಲ್ಲಿಸಲಾದ ಆಯವ್ಯಯ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ನೀಡಲು ಸಭೆಗೆ ಮಂಡಿಸಿದರು. ಸಭೆಯು ತೆಗೆದುಕೊಂಡ ಕ್ರಮವನ್ನು ಅನುಮೋದಿಸಿತು. ಈ ಸಂದರ್ಭದಲ್ಲಿ ಶ್ರೀ ಹೆಚ್.ಪಿ.ಮಂಜುನಾಥ, ಮಾನ್ಯ ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ ರವರು ಮಾತನಾಡುತ್ತಾ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನವು ನಮಗೆ ಮರಳುಗಾಡಿನಲ್ಲಿ ನೀರು ದೊರೆತಂತಾಗಿದೆ. ನಾವು ಉತ್ತಮ ನಿರೀಕ್ಷೆಯನ್ನು ಇಟ್ಟುಕೊಂಡು ಸಭೆಗೆ ಬಂದಿರುವುದಾಗಿದೆಯೆಂದು ತಿಳಿಸಿ ವರ್ಷದಿಂದ ವರ್ಷಕ್ಕೆ ಅನುದಾನ ಮಂಡಳಿಯಿಂದ ಹೆಚ್ಚಾಗಬೇಕು. ಉತ್ತರ ಕರ್ನಾಟಕದಲ್ಲಿ ಪ್ರತೀ ಶಾಸಕರಿಗೆ ರೂ.100.00 ಕೋಟಿಯಷ್ಟು ಅನುದಾನವನ್ನು ಕೊಡುತ್ತಾರೆ. ಹಾಗೇಯೇ ಇಲ್ಲಿಯೂ ಕೂಡ ಕ್ಷೇತ್ರವಾರು ಅನುದಾನ ಹೆಚ್ಚಾಗಿ ನೀಡಲು ಮಾನ್ಯ ಅಧ್ಯಕ್ಷರು ಮುತುವರ್ಜಿ ವಹಿಸಬೇಕೆಂದು ಕೋರಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಮಾತನಾಡಿ ಈಗಾಗಲೇ ತಮ್ಮೆಲ್ಲರ ಸಲಹೆಯಂತೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

**ತೀರ್ಮಾನ:1:- ಮಂಡಳಿಯ 2022-23ನೇ ಸಾಲಿನ ಆಯವ್ಯಯ ಪಪ್ರಸ್ತಾವನೆಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.**

## ಸಭಾ ವಿಷಯ ಸೂಚಿ:4:- 2021-22ನೇ ಸಾಲಿನ ಮುಂದುವರೆದ ಕಾಮಗಾರಿಗಳ ಪ್ರಗತಿ ಪರಿಶೀಲನೆ ಕುರಿತು.

ಕಾರ್ಯದರ್ಶಿಗಳು ಮಾತನಾಡುತ್ತಾ 2021-22ನೇ ಸಾಲಿನ 629 ಮುಂದುವರೆದ ಕಾಮಗಾರಿಗಳು ಮತ್ತು 12 ಹೊಸ ಕಾಮಗಾರಿಗಳು ಸೇರಿ ಒಟ್ಟು 641 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ನುಮೋದನೆ ನೀಡಲಾಗಿದ್ದು, ಮಾರ್ಚ್-2022ರ ಅಂತ್ಯದವರೆಗೆ ಒಟ್ಟು 405 ಕಾಮಗಾರಿಗಳನ್ನು ಪೂರ್ಣಗೊಳಿಸಿ ತಾತ್ಕಾಲಿಕ ಲೆಕ್ಕಗಳಂತೆ ರೂ.2819.07 ಲಕ್ಷಗಳ ವೆಚ್ಚ ಭರಿಸಲಾಗಿದೆ. ಬಾಕಿ ಉಳಿದ 236 ಕಾಮಗಾರಿಗಳಲ್ಲಿ ಕಾಮಗಾರಿ ಬದಲಾವಣೆ/ಸ್ಥಳ ತಕರಾರು ಇತ್ಯಾದಿ

ಕಾರಣಗಳಿಂದ 50 ಕಾಮಗಾರಿಗಳು ಆಡಳಿತಾತ್ಮಕ ಅನುಮೋದನೆಗೆ ಬಾಕಿ ಇರುತ್ತವೆ. ಒಟ್ಟಾರೆ ಬಾಕಿ ಇರುವ 236 ಕಾಮಗಾರಿಗಳನ್ನು ಇನ್ನು ಮೂರು ತಿಂಗಳೊಳಗಾಗಿ ಮುಕ್ತಾಯ ಮಾಡುವ ಗುರಿ ಹೊಂದಲಾಗಿದೆಯೆಂದು ವಿವರಿಸಿದರು.

ಸಭೆಯು ಒಟ್ಟಾರೆ ಪ್ರಗತಿಯನ್ನು ಪರಿಶೀಲಿಸಿ ತೃಪ್ತಿ ವ್ಯಕ್ತಪಡಿಸಿ, ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಮುಕ್ತಾಯ ಮಾಡಲು ಅನುಷ್ಠಾನಾಧಿಕಾರಿಗಳಿಗೆ ತಿಳಿಸಲು ಸೂಚಿಸಿದರು.

**ಸಭಾ ವಿಷಯ ಸೂಚಿ:5:- 2022-23ನೇ ಸಾಲಿನ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸುವ ಬಗ್ಗೆ.**

ಕಾರ್ಯದರ್ಶಿಗಳು ಮಾತನಾಡುತ್ತಾ ಸರ್ಕಾರದ ಪತ್ರ ಸಂಖ್ಯೆ : ಪಿಡಿಎಸ್ : 15 : ಪಿಎಂಎಂ:2021: ಪಿಎಂಎಸ್ : 2021 ದಿನಾಂಕ : 08.02.2022ರಲ್ಲಿ ದಿನಾಂಕ : **11.03.2022**ರ ನಡೆದ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಎಂ.ಎಂ.ಆರ್ ಸಭೆಯ ನಡವಳಿಯಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯು ಪರಿಸರಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿರುತ್ತದೆ.

2022-23ನೇ ಸಾಲಿನ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಮಂಡಳಿಗೆ 2021-22ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಶೇ.25ರಷ್ಟು ಅನುದಾನವನ್ನು ಹೆಚ್ಚಿಗೆ ಮಾಡಿ ಸದರಿ ಅನುದಾನಕ್ಕೆ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಮುಖ ಕಾರ್ಯಕ್ರಮಗಳನ್ನು ಅಳವಡಿಸಿ ರೂಪಿಸಬೇಕಾಗಿರುತ್ತದೆ. ಸರ್ಕಾರವು ಮಲೆನಾಡಿಗೆ ಪೂರಕವಾದ ಕಾಮಗಾರಿಗಳನ್ನು ಅಳವಡಿಸಿಕೊಂಡು ಮೈಕ್ರೋ ಮತ್ತು ಮ್ಯಾಕ್ರೋ ಕಾಮಗಾರಿಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ವಿವರಿಸಿದರು. ರೂ.5.00 ಲಕ್ಷದೊಳಗೆ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ. ವಾಣಿಜ್ಯ ಉದ್ದೇಶವನ್ನು ಹೊಂದಿರುವ ಕಾಮಗಾರಿಗಳು, ಸ್ಮಾರಕ ಮತ್ತು ಸ್ಮಾರಕ ಕಟ್ಟಡಗಳು ವಸತಿ ಗೃಹಗಳ ನಿರ್ಮಾಣ, ಧಾರ್ಮಿಕ ಕಟ್ಟಡಗಳ ನಿರ್ಮಾಣ, ಸಾಲ ಸೌಲಭ್ಯ, ಕೊಳವೆ ಬಾವಿ, ಯಂತ್ರ ಖರೀದಿ, ಬೀದಿ ದೀಪ ಅಳವಡಿಸುವುದು, ವೈಯಕ್ತಿಕ ಫಲಾನುಭವಿಗಳಿಗೆ ಪರಿಕರ ವಿತರಣೆ ಲ್ಯಾಬ್ ಸ್ಥಾಪನೆ ಮುಂತಾದವುಗಳ ಪ್ರಸ್ತಾವನೆಯನ್ನು ಪಡೆಯುವಂತಿಲ್ಲವೆಂದು ವಿವರಿಸಿದರು. ಉಳಿದಂತೆ ಕಾಲುಸಂಕ, ಕಿರು ಸೇತುವೆ, ತೂಗು ಸೇತುವೆ, ಪಕ್ಕಾ ಆರ್.ಸಿ.ಸಿ./ಡಾಂಬರು ರಸ್ತೆ, ಬಸ್ ಸ್ಟ್ಯಾಂಡ್, ಅಂಗನವಾಡಿ, ಶಾಲೆಗಳು, ಚೆಕ್ ಡ್ಯಾಂ ಮುಂತಾದವುಗಳನ್ನು ಆದ್ಯತೆಯ ಮೇಲೆ ಪಡೆಯಲು ವಿವರಿಸಿದರು. ಪರಿಶಿಷ್ಟ ಜಾತಿ ವರ್ಗದ ಕಾಮಗಾರಿಗಳಿದ್ದಾಗ 2013ರ ಕಾಯ್ದೆಯಡಿ ಕಾಲೋನಿ, ತಾಂಡಾ, ಹಾಡಿಗಳಲ್ಲಿ ಮಾತ್ರ ಪ್ರಸ್ತಾಪಿಸಬೇಕೆಂದು ವಿವರಿಸಿದರು

ಸರ್ಕಾರದ ದಿನಾಂಕ : 19.02.2022ರ ಪತ್ರದಲ್ಲಿ 2022-23ನೇ ಸಾಲಿಗೆ ಹೊಸ ಕ್ರಿಯಾಯೋಜನೆಯನ್ನು ರೂಪಿಸಲು ಹಾಗೂ ಕ್ರಿಯಾ ಯೋಜನೆಯನ್ನು ರೂಪಿಸುವಾಗ 2021-22ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಶೇ.25ರಷ್ಟು ಅನುದಾನವನ್ನು ಹೆಚ್ಚಿಗೆ ಮಾಡಿ ಕ್ರಿಯಾಯೋಜನೆಯನ್ನು ರೂಪಿಸಲು ತಿಳಿಸಿರುತ್ತಾರೆ. ಅದರಂತೆ ನಿಗದಿಪಡಿಸಿದ

| | |
|---|---|
| 1. ಬಂಡವಾಳ ವೆಚ್ಚ | ರೂ.2458.75 ಲಕ್ಷ |
| 2. ವಿಶೇಷ ಘಟಕ ಯೋಜನೆಯಡಿ | ರೂ. 563.75 ಲಕ್ಷ |
| 3. ಗಿರಿಜನ ಉಪಯೋಜನೆಯಡಿ | ರೂ. 227.50 ಲಕ್ಷ |
| | ಒಟ್ಟು ರೂ.3250.00 ಲಕ್ಷ |

ಇದರಲ್ಲಿ ಶೇ.5ರಷ್ಟು ಸರ್ಕಾರದ ವಿವೇಚನಾ ನಿಧಿಗೆ ರೂ.162.50 ಲಕ್ಷ ಹಾಗೂ ಅಧ್ಯಕ್ಷರ ವಿವೇಚನಾ ನಿಧಿಗೆ ಶೇ.5ರಷ್ಟು ರೂ.162.50 ಲಕ್ಷ ಒಟ್ಟಾರೆ ರೂ.325.00 ಲಕ್ಷ ಮೀಸಲಿಟ್ಟಲ್ಲಿ ರೂ.2925.00 ಲಕ್ಷ ಉಳಿಕೆಯಾಗುತ್ತದೆ. ಈ ಬಗ್ಗೆ ಮೇಲಿನ ಮಾರ್ಗಸೂಚಿಯಲ್ಲಿ ತಿಳಿಸಿದಂತೆ ಕ್ರಿಯಾಯೋಜನೆಯನ್ನು ರೂಪಿಸಬೇಕಾಗುತ್ತದೆಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸರ್ಕಾರಕ್ಕೆ ನೇರವಾಗಿ ಸಲ್ಲಿಕೆಗಾಗಿ ಪತ್ರಗಳ ಕೋರಿಕೆಗಳನ್ನು ಸಭೆಗೆ ಮಂಡಿಸಿದರು. ಹಾಗೆಯೇ ಶ್ರೀ ಹರೀಶ್ ಪೂಂಜಾ, ಮಾನ್ಯ ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ ಇವರ ಪ್ರಸ್ತಾಪಿತ ರೂ.3.00 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯ ಪ್ರಸ್ತಾವವನ್ನು 2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಸೂಚಿಸಿರುವ ಪ್ರಸ್ತಾಪವನ್ನು ಸಭೆಯ ಮುಂದಿಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ಯು.ಟಿ.ಖಾದರ್, ಮಾನ್ಯ ಶಾಸಕರು, ಮಂಗಳೂರು ಇವರು ಮಾತನಾಡುತ್ತಾ ಕಡಿಮೆ ಅನುದಾನದಲ್ಲಿ ನಿಗದಿಪಡಿಸಿರುವುದರಿಂದ ಹೆಚ್ಚಿನ ಅನುದಾನಕ್ಕೆ ಸಭೆಯು ತೀರ್ಮಾನಿಸಬೇಕಾಗುತ್ತದೆಂದು ಅಭಿಪ್ರಾಯಿಸಿದರು ಹಾಗೂ ಇನ್ನೂ ಪ್ರತೀ ಶಾಸಕರಿಗೆ ತಲಾ ರೂ.1.00 ಕೋಟಿಯಂತೆ ಅನುದಾನವನ್ನು ಮೀಸಲಿರಿಸಲು ಹಾಗೂ ಅಧ್ಯಕ್ಷರ ವಿವೇಚನಾ ನಿಧಿಯನ್ನು ಬಲಪಡಿಸಲು ಮಾನ್ಯ ಮುಖ್ಯಮಂತ್ರಿಯವರನ್ನು ಕೋರಲು ಸಭೆಯ ಸದಸ್ಯರೆಲ್ಲರೂ ಒತ್ತಾಯಿಸಿದರು.

ಸಭಾ ಚರ್ಚೆಯ ಬಳಿಕ ಈಗ ಸರ್ಕಾರದಿಂದ ಕ್ರಿಯಾಯೋಜನೆ ರೂಪಿಸಲು ತಿಳಿಸಿರುವ ಅನುದಾನವನ್ನು ಎಲ್ಲಾ ಶಾಸಕರ ಕ್ಷೇತ್ರಗಳಿಗೆ ಅಭಿವೃದ್ಧಿಗಾಗಿ ಹಂಚಿಕೆ ಮಾಡಿ ಕ್ರಿಯಾ ಯೋಜನೆಯನ್ನು ರೂಪಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಿ ತೀರ್ಮಾನಿಸಲಾಯಿತು.

**ತೀರ್ಮಾನ:2:- ಮಂಡಳಿಯ 2022-23ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾದ ಕ್ರಿಯಾ ಯೋಜನೆಯಲ್ಲಿ ಪ್ರತೀ ವಿಧಾನಸಭಾ / ವಿಧಾನ ಪರಿಷತ್ ಕ್ಷೇತ್ರಗಳಿಗೆ ಹಂಚಿಕೆ ಮಾಡಿ ಕ್ರಿಯಾಯೋಜನೆಯನ್ನು ರೂಪಿಸಲು ಸಭೆಯು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಿ ಅನುಮೋದನೆ ನೀಡಿತು.**

**ಸಭಾ ವಿಷಯ ಸೂಚಿ:6: ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇತರೆ ವಿಷಯಗಳು.**

ಕೊನೆಯದಾಗಿ ಚರ್ಚಿಸತಕ್ಕ ವಿಷಯಗಳು ಏನೂ ಇಲ್ಲದೇ ಇರುವ ಕಾರಣ ಕಾರ್ಯದರ್ಶಿಗಳು ಸಭೆಗೆ ವಂದಿಸುವುದರೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

(ಕೆ.ಎಸ್.ಮಣಿ)
ಕಾರ್ಯದರ್ಶಿಗಳು,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

K.S. [signature]
(ಕೆ.ಎಸ್.ಗುರುಮೂರ್ತಿ)
ಅಧ್ಯಕ್ಷರು,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

# ಹಾಜರಾತಿ

## ಅನುಬಂಧ

| ಕ್ರ.ಸಂ. | ಸದಸ್ಯರುಗಳ ವಿವರ | ಕ್ಷೇತ್ರ |
|---|---|---|
| 1 | ಶ್ರೀ ಕೆ.ಎಸ್.ಗುರುಮೂರ್ತಿ, ಮಾನ್ಯ ಅಧ್ಯಕ್ಷರು, | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ. |
| 2 | ಶ್ರೀ ಟಿ.ಡಿ. ರಾಜೇಗೌಡ, ಮಾನ್ಯ ಶಾಸಕರು | ಶೃಂಗೇರಿ |
| 3 | ಶ್ರೀ ಬೆಳ್ಳಿ ಪ್ರಕಾಶ್, ಮಾನ್ಯ ಶಾಸಕರು | ಕಡೂರು |
| 4 | ಶ್ರೀ ಎನ್. ಲಿಂಗಣ್ಣ, ಮಾನ್ಯ ಶಾಸಕರು | ಮಾಯಕೊಂಡ |
| 5 | ಶ್ರೀ . ಸಿ.ಎಂ.ನಿಂಬಣ್ಣನವರ್, ಮಾನ್ಯ ಶಾಸಕರು | ಕಲಘಟಗಿ |
| 6 | ಶ್ರೀ ಯು.ಟಿ.ಖಾದರ್, ಮಾನ್ಯ ಶಾಸಕರು | ಮಂಗಳೂರು |
| 7 | ಶ್ರೀ ಹೆಚ್. ಹೆಚ್.ಪಿ.ಮಂಜುನಾಥ್ ಮಾನ್ಯ ಶಾಸಕರು | ಹುಣಸೂರು |
| 8 | ಶ್ರೀ ಕೆ.ಮಹದೇವ, ಮಾನ್ಯ ಶಾಸಕರು | ಪಿರಿಯಾಪಟ್ಟಣ |
| 9 | ಶ್ರೀ ಆಯನೂರು ಮಂಜುನಾಥ, ಮಾನ್ಯ ಶಾಸಕರು | ನೈರುತ್ಯ ಪದವೀಧರ ಕ್ಷೇತ್ರ |
| 10 | ಶ್ರೀ ಡಿ.ಎಸ್.ಅರುಣ್, ಮಾನ್ಯ ಶಾಸಕರು | ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಶಿವಮೊಗ್ಗ |
| 11 | ಶ್ರೀಮತಿ ಸುಧಾಮಣಿ, ಭದ್ರಾವತಿ | ನಾಮನಿರ್ದೇಶಿತ ಸದಸ್ಯರು |
| 12 | ಶ್ರೀ ಎನ್.ಶೇಖರಪ್ಪ, ಶಿಕಾರಿಪುರ | ನಾಮನಿರ್ದೇಶಿತ ಸದಸ್ಯರು |
| 13 | ಶ್ರೀ ಹೆಚ್.ಆರ್.ಅಶೋಕ್ ನಾಯಕ, ಸೊರಬ | ನಾಮನಿರ್ದೇಶಿತ ಸದಸ್ಯರು |
| 14 | ಶ್ರೀ ಬಿ.ಹೆಚ್.ರಾಘವೇಂದ್ರ, ಸಾಗರ | ನಾಮನಿರ್ದೇಶಿತ ಸದಸ್ಯರು |
| 15 | ಶ್ರೀ ಟಿ.ಬಿ. ಜಗದೀಶ್, ಶಿವಮೊಗ್ಗ | ನಾಮನಿರ್ದೇಶಿತ ಸದಸ್ಯರು |
| 16 | ಶ್ರೀ ರಾಮ ಅಮೀನ್ ಪಟ್ಟಂಡಿ, ಮಂಗಳೂರು | ನಾಮನಿರ್ದೇಶಿತ ಸದಸ್ಯರು |
| 17 | ಶ್ರೀ ಎ.ಕೆ. ಮಹದೇವಪ್ಪ, ಭದ್ರಾವತಿ | ನಾಮನಿರ್ದೇಶಿತ ಸದಸ್ಯರು |
| 18 | ಶ್ರೀ ಗಣೇಶ್ ನಾಯಕ್, ಹಿರೇಕೆರೂರು | ನಾಮನಿರ್ದೇಶಿತ ಸದಸ್ಯರು |
| 19 | ಶ್ರೀ ಎ.ಜಯರಾಮ ಭಂಡಾರಿ, ಕುಂದಾಪುರ | ನಾಮನಿರ್ದೇಶಿತ ಸದಸ್ಯರು |
| 20 | ಶ್ರೀ ಕೆ.ಎಸ್.ಮಣಿ | ಕಾರ್ಯದರ್ಶಿಗಳು |
| 21 | ಶ್ರೀ ಡಾ: ಆರ್.ಸೆಲ್ವಮಣಿ, ಜಿಲ್ಲಾಧಿಕಾರಿಗಳು | ಶಿವಮೊಗ್ಗ |